## ರನ್ನನ ಹೊಸಗನ್ನಡ ಗದಾಯುದ್ಧ




**ಹಳಗನ್ನಡ** ಕಾವ್ಯಗಳನ್ನು ಹೊಸಗನ್ನಡದಲ್ಲಿ ಓದಲು ಬಯಸುವ ಸಾಹಿತ್ಯದ ವಿದ್ಯಾರ್ಥಿಗಳಿಗೆ ಮೈನುದ್ದೀನ ರೇವಡಿಗಾರರ 'ರನ್ನನ ಹೊಸಗನ್ನಡ ಗದಾಯುದ್ಧ' ಕೃತಿ ಪ್ರಿಯವಾಗಬಲ್ಲದು. ಹಳಗನ್ನಡದ ಬಾಗುಬಳುಕು ಹಾಗೂ ಸೂಕ್ಷ್ಮಗಳನ್ನು ಬಲ್ಲವರ ನೆರವಿಲ್ಲದೆ ಗದಾಯುದ್ಧದ ಪ್ರವೇಶ ಕಷ್ಟ. ಅಂಥವರಿಗೆ ಈ ಕೃತಿ ಸುಲಿದ ಬಾಳೆಯ ಹಣ್ಣಿನಂತಹುದು; ಪದಕೋಶಗಳ ಅಗತ್ಯವಿಲ್ಲದೆ ಗದಾಯುದ್ಧದ ಕಥೆಯನ್ನು ತಿಳಿದುಕೊಳ್ಳಲು ಅನುವು ಮಾಡಿಕೊಡುವಂತಹುದು.

ಗದಾಯುದ್ಧದ ಕಥೆಯನ್ನು ಅರಿತುಕೊಳ್ಳುವ ನಿಟ್ಟಿನಲ್ಲಿ ಈ ಕೃತಿ ನೆರವಾಗುತ್ತದಾದರೂ, ಕವಿ ರನ್ನನ ಕಾವ್ಯದ ನಿಜ ಚೆಲುವನ್ನು ಅರ್ಥ ಮಾಡಿಕೊಳ್ಳಲು ಮೂಲ ಕೃತಿಯನ್ನೇ ಓದಬೇಕು. ಹಳಗನ್ನಡ ಪಠ್ಯಕ್ಕೆ ಮುಖಾಮುಖಿಯಾಗುತ್ತಲೇ, ಮೂಲ ತೊಡಕಾದಾಗ ಮೈನುದ್ದೀನರ ಕೃತಿಯನ್ನು ಆಶ್ರಯಿಸುವುದರಿಂದ ಅರ್ಥಪೂರ್ಣ ಓದು ಸಹಾಯವಾಗಬಹುದು. ಈ ಹೊಸಗನ್ನಡದ ಕೃತಿಯಲ್ಲಿ ಮೂಲ ಪಠ್ಯವನ್ನೂ ಕೊಟ್ಟಿದ್ದರೆ ಓದುಗರಿಗೆ ಅನುಕೂಲವಾಗುತ್ತಿತ್ತು.

**ಲೇ: ಡಾ. ಮೈನುದ್ದೀನ ರೇವಡಿಗಾರ; ಪು: 108; ಬೆ: ₹ 150; ಪ್ರ: ಹಂಬಲ ಪ್ರಕಾಶನ, ಬಾಗಲಕೋಟೆ.**
**ಫೋ: 9481983776**

---

## ಪುಟ್ಟಮ್ಮಯ್ಯ




**ಪ್ರೊ. ಕಟಾವೀರನಹಳ್ಳಿ** ನಾಗರಾಜ ಅವರದು ತುಮಕೂರು ಜಿಲ್ಲೆಯ ಸಾಹಿತ್ಯ ವಲಯದಲ್ಲಿ ಪರಿಚಿತ ಹೆಸರು. ಈ ಕನ್ನಡದ ಮೇಷ್ಟ್ರು ನಿವೃತ್ತಿಯ ನಂತರ ಕಾದಂಬರಿ ಪ್ರಕಾರಕ್ಕೆ ತಮ್ಮನ್ನೊಡ್ಡಿಕೊಂಡಿರುವುದು ಕುತೂಹಲಕರ. ತಮ್ಮ ಚೊಚ್ಚಿಲ ಕಾದಂಬರಿಗೆ ಸ್ವಾತಂತ್ರ್ಯಪೂರ್ವ ಸಂದರ್ಭವನ್ನು ಲೇಖಕರು ಆರಿಸಿಕೊಂಡಿದ್ದರೂ, ಆ ಕಥನ ಒಂದು ಕಾಲಘಟ್ಟದ ಕಥನವಾಗಿಯಷ್ಟೇ ಉಳಿಯದೆ, ಈ ಹೊತ್ತಿನ ಸಾಮಾಜಿಕ ವಿವೇಕದ ತಾತ್ವಿಕತೆಯನ್ನು ಸ್ಪಷ್ಟಪಡಿಸಿಕೊಳ್ಳಲು ಒಳನೋಟಗಳನ್ನು ನೀಡುವಂತಿದೆ.

'ಪುಟ್ಟಮ್ಮಯ್ಯ' ಕಾದಂಬರಿಯ ಶಕ್ತಿಯಿರುವುದು ಅದರ ವಿವರಗಳಲ್ಲಿ. ಗ್ರಾಮೀಣ ಸಮಾಜದ ಜೀವಂತ ಚಿತ್ರಗಳನ್ನು ಕಟ್ಟಿಕೊಡುವ ಕೃತಿ, ಜನಪದರ ಬದುಕಿನೊಳಗೆ ಹಾಸುಹೊಕ್ಕಾದ ಆಚರಣೆ ಮತ್ತು ನಂಬಿಕೆಗಳನ್ನು ಪರಿಣಾಮಕಾರಿಯಾಗಿ ಒಳಗೊಂಡಿದೆ. ಸಂಪ್ರದಾಯದ ಹೆಸರಿನಲ್ಲಿ ಕೆಲವು ನಂಬಿಕೆಗಳು ಜೀವವಿರೋಧಿಯಾಗಿ, ಮೌಢ್ಯದ ರೂಪ ತಾಳುವುದನ್ನೂ ಕಾದಂಬರಿಕಾರರು ಚಿತ್ರಿಸಿದ್ದಾರೆ. ಕೃತಿಯ ಶೀರ್ಷಿಕೆಯೇ ಧ್ವನಿಸುವಂತೆ, ಈ ಕಥನ ಹೆಣ್ಣಿನ ತುದಿಮೊದಲಿಲ್ಲದ ಸಂಕಷ್ಟಗಳ ಮಾಲಿಕೆಯೂ ಆಗಿದೆ. ಕಾದಂಬರಿಯ ತಾತ್ವಿಕತೆ ಚರ್ಚೆ ಹಾಗೂ ಭಿನ್ನ ನೋಟಗಳಿಗೆ ಆಸ್ಪದ ಕಲ್ಪಿಸುವಂತಿದ್ದರೂ, ಕಥನ ಹಾಗೂ ಸೌಷ್ಟವದ ಕಾರಣದಿಂದಾಗಿ 'ಪುಟ್ಟಮ್ಮಯ್ಯ' ಗಮನಸೆಳೆಯುತ್ತದೆ.

**ಲೇ: ಪ್ರೊ. ಕಟಾವೀರನಹಳ್ಳಿ ನಾಗರಾಜ; ಪು: 218, ಬೆ: ₹ 200; ಪ್ರ: ಶತಭಿಷ ಪ್ರಕಾಶನ, ಕಟಾವೀರನಹಳ್ಳಿ.**
**ಫೋ: 9141766728**